# ಗೋರಕ್ಷಣ
# GORAKSHANA

9 ನೇ ವರ್ಷ — 1959 ನೇ ಫೆಬ್ರವರಿ ತಾ || 28 Feb 59



**Protect the Cow** ಗೋಸಂರಕ್ಷಣೆ ಮಾಡಿ

ಗೋಕ್ಷಣ, ಪ್ರಾಣಿದಯಾ ಕಾರ್ಯಗಳಿಗೆ ಜೆಬ್ಬಾಗಿ ನಡೆಯುತಲಿ
ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ
ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರತಿಪಾದನ
ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ
ಪೋಷಕರು ರೂ 25, ಬೆಂಬಲಿಗರು ರೂ 10 (ಇಂದೇಸಾ[illegible]) ಧನಾತ,
ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು
ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

**Advertise in Goraksana and help the pious cause**

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು


## ಗೋ ಮ ಹಿ ಮೆ

( ಮುಂದುವರಿದುದು )

ಗೋವುಗಳ ಸಂರಕ್ಷಣೆಯ ಬಗ್ಗೆ ನಮ್ಮ ಧಾರ್ಮಿಕ ಭಾವನೆಯಿಂದ ಪ್ರೇರಿತ ಸ್ವಲ್ಪ ಜಾಗ್ರತರಾದರೆಂದರೆ ಅತಿಶಯದ ಮಾತಾಗಲಾರದು ಗೋರಕ್ಷಣೆಯ ಬಗ್ಗೆ ನಮ್ಮ ಧಾರ್ಮಿಕ ಭಾವನೆಯ ಪ್ರಯತ್ನವೂ, ಚಳವಳಿಯೂ ಸಹಾ ಬಹಳ ಅಲ್ಪವಾದದ್ದು. ಈ ಗೋಸಂರಕ್ಷಣೆಯಿಂದ ಪುಣ್ಯ ಬರುವುದು ಮಾತ್ರವೇ ಆಗಿಂದೆ, ನಮ್ಮ ಭಾವಿ ಪ್ರಜೆಗಳಾದ ನಮ್ಮ ಮಕ್ಕಳಿಗೆ ಬೇಕಾದಷ್ಟು ಹಾಲು ಬೆಣ್ಣೆ ಮುಂತಾದ ಉತ್ತಮ ಪೌಷ್ಟಿಕ ಆಹಾರವೂ ದೊರೆಯುತ್ತದೆ. ಇದರಿಂದ ಆಹಾರ ಸಮಸ್ಯೆಗೆ ತುಂಬಾ ಪ್ರಯೋಜನವಾದಂತಾಗುತ್ತದೆ ಮತ್ತು ಕೃಷಿಗೆ ಹೇರಳವಾಗಿ ಇವುಗಳ ಸೆಗಣಿ ಮೂತ್ರಗಳಿಂದ ಗೊಬ್ಬರವೂ ದೊರೆಯುತ್ತದೆ ಇದೇ ಗೋವುಗಳ ಗಂಡು ಸಂತತಿಯ ಮೂಲ [illegible]ವುಗಳ ಅಭಿವೃದ್ಧಿಯಾದರೆ ಕೃಷಿಗೆ ಹೊಲವನ್ನು ಹೂಡುವದು ಮತ್ತು [illegible]ಡ್ಡಿ ಕಾಡು ಮುಂತಾದ ಕಡೆ ಗಾಡಿ [illegible]ಳೆಯುವ ಮೂಲಕ ವಾಹನ ಸೌಕರ್ಯ ಸಹಾ ಬಹಳ ಪ್ರಯೋಜನವುಂಟು. [illegible]ರೀತಿ ಗೋಸಂತಾನದಿಂದ ಅನೇಕ [illegible]ಹತ್ತಾದ ಪ್ರಯೋಜನಗಳಿದ್ದುದರಿಂದಲೇ ನಮ್ಮ ಪ್ರಾಚೀನ ಧಾರ್ಮಿಕ ಭಾರತೀಯರು ಗೋಸಂರಕ್ಷಣೆಯ ಬಗ್ಗೆ ಧಾರ್ಮಿಕ ತಳಹದಿಯನ್ನು ಹಾಕಿ ಪ್ರತಿ ಒಬ್ಬ ಭಾರತೀಯನೂ ಇದರ ಬಗ್ಗೆ ಸಂಪೂರ್ಣ ಅಸಕ್ತನಾಗಿರುವಂತೆ ವಿಧಿಸಿರುತ್ತಾರೆ ಆದ್ದರಿಂದ ಪ್ರಕೃತ ನಮ್ಮ ಈ ಭಾರತ ವರ್ಷದಲ್ಲಿ ಈಗ ಆಗುತ್ತಿರುವ ಗೋವಧೆಯನ್ನು ಕಾನೂನು ಮೂಲಕ ಪ್ರತಿಬಂಧಿಸುವುದು ಮಾತ್ರವೆ ಅಲ್ಲದೆ, ವೃದ್ಧಗೋವುಗಳಿಗೆ, ವೃದ್ಧರಾದ ಸರ್ಕಾರಿ ನೌಕರರುಗಳು ಕೂತು ಊಟ ಮಾಡುವಂತೆ ಪೆನ್ಷನ್ ಕೊಡುವ ಹಾಗೆ ಮುಫತ್ತಾಗಿ ಸಂರಕ್ಷಣೆ ಮಾಡುವಂತೆ ಒಂದು ಸಂಘಟಿತ ವ್ಯವಸ್ಥೆಯಾಗಬೇಕು. ಈ ಬಗ್ಗೆ ಸರ್ಕಾರವೂ ಸಹಾ ಸರಿಯಾದ ಪ್ರೋತ್ಸಾಹ ಬೆಂಬಲಗಳನ್ನು ಅಗತ್ಯಕೊಡಬೇಕು.

ಈ ಗೋಸಂರಕ್ಷಣೆಯ ವಿಷಯದಲ್ಲಿ ಸಮಸ್ತ ಭಾರತೀಯರಿಗೆ ಒಳ್ಳೆ ಶ್ರದ್ಧಾಪೂರ್ವಕವಾದ ಉತ್ಸಾಹ ಮತ್ತು ಕ್ರಿಯಾಶಕ್ತಿಯನ್ನು ಗೋಬ್ರಾಹ್ಮಣ ಪರಿಪಾಲಕನಾದ ಶ್ರೀ ಗೋಪಾಲಕೃಷ್ಣದೇವರು ಅನುಗ್ರಹ ಮಾಡಲಿ ಧಾರ್ಮಿಕ ಭಾರತ ವರ್ಷದಲ್ಲಿ ಗೋವಧೆಯು ಕಾಯಿದೆ ಪ್ರಕಾರ ನಿಲ್ಲಿಸಲ್ಪಟ್ಟು, ಸರ್ವತ್ರ ಗೋವುಗಳು ಸಮೃದ್ಧವಾಗಿದ್ದು

## ಗೋಸಂಬಂಧ ಸುದ್ದಿಗಳು

ಬೆಂಗಳೂರಿನಲ್ಲಿ ಈ ತಿಂಗಳು 25 ನೇ ತಾ|| ಬೆಂಗಳೂರಿನಲ್ಲಿ ಅಖಿಲ ಭಾರತ ಗೋಪಾಲಕರ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಾ, ವಿಜ್ಞಾನ ಸಂಶೋಧನೆಗಳ ಫಲವಾಗಿ ದೊರಕುತ್ತಿರುವ ಜ್ಞಾನ ಮತ್ತು ಉಪಕರಣಗಳನ್ನು ಪಶುಸಂಪದಭಿವೃದ್ಧಿಗಳಿಗೆ ಉಪಯೋಗಿಸಬೇಕೆಂದು ಮೈಸೂರು ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ತಿಳಿಸಿದರು

ಈ ತಿಂಗಳು 2 ನೇ ತಾ|| ಕೇಂದ್ರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಬೆಂಗಳೂರಿನಲ್ಲಿ ಮಾತನಾಡುತ್ತ ಭಾರತ ವ್ಯವಸಾಯ ಕ್ರಮದಲ್ಲಿ ಗೋವು ಆತ್ಮವಾಗಿದೆ, ಪ್ರತಿಯೊಂದು ಮನೆಯಲ್ಲಿ ಕರೆಯುವ ಹಸು ಇದ್ದರೆ ಆಹಾರ ಉತ್ಪಾದನೆ ಹೆಚ್ಚುವುದಾಗಿ ತಿಳಿಸಿದರು. ಅವರು ತಮ್ಮ ಮಾತು ಮುಂದುವರಿಸುತ್ತಾ, ಹಾಲು ಕರೆಯುವ ಹಸು 6 ಎಕರೆ ಗದ್ದೆಗೆ ಸಮ ಎಂದರು

ಬೆಂಗಳೂರಿನಲ್ಲಿ ಈ ತಿಂಗಳು 22 ನೇ ತಾ|| ಅಖಿಲ ಭಾರತ ಜಾನುವಾರು ಪ್ರದರ್ಶನವನ್ನು ಕೇಂದ್ರ ಕೈಗಾರಿಕಾ ಸಚಿವ ಶ್ರೀ ಲಾಲ ಬಹದ್ದೂರ ಶಾಸ್ತ್ರಿ ಆರಂಭಿಸಿ ಉತ್ತಮ ಪಶುಸಂರಕ್ಷಣೆಯಿಂದ ಉತ್ತಮ ವ್ಯವಸಾಯ, ಉತ್ತಮ ವ್ಯವಸಾಯದಿಂದ ಉತ್ತಮ ವಾಣಿಜ್ಯ ಮತ್ತು ಉತ್ತಮ ಕೈಗಾರಿಕೆ ಉಂಟಾಗುವದು ಎಂದರು

## ದಿವ್ಯವಾಣಿ

ಕಪಿಲೆ ಎಂಬ ಗೋವಿನ ಅಂಗದಲ್ಲಿ 33 ಕೋಟಿ ದೇವತೆಗಳೂ ಅವಾಸವಾಗಿದ್ದಾರೆಂದು ವೇದಶಾಸ್ತ್ರಗಳು ಸಾರುತ್ತಿವೆ ಭೂವಿಯನ್ನೇ ಗೋರೂಪವೆಂದೂ ಹೇಳುತ್ತಾರೆ ವಿಶ್ವದ ಪ್ರತೀಕವೇ ಗೋವು ಎಂಬುದು ನಮ್ಮ ನಂಬಿಕೆ ಒಮ್ಮೆ ಗೋಸಂದರ್ಶನ ಮಾಡಿದವೆಂದರೆ ಇಡೀ ವಿಶ್ವವನ್ನೇ, ವಿಶ್ವಕರ್ತನಾದ ವಿರಾಟ್ಪುರುಷನನ್ನೇ ಸಂದರ್ಶನ ಮಾಡಿದಷ್ಟು ಪುಣ್ಯ ಬರುತ್ತದೆಂಬುದು ನಿರ್ವಿವಾದ ಸಂಗತಿ

## ಸುದ್ದಿಗಳು

ಜೈಂತಿಯ ಬೆಟ್ಟಗಳ ನಡುವೆ ಭಾರತ ಪಾಕಿಸ್ತಾನ ಗಡಿಯಲ್ಲಿ ಡಾಕಿ ಎಂಬಲ್ಲಿ ಪಾಕಿಸ್ತಾನ ಸೇನೆಗಳ ಭಾರಿ ಜಮಾವಣೆ ನಡೆದಿದೆ

ಪಾಕಿಸ್ತಾನದಲ್ಲಿ ಸೇನಾ ನೆಲೆ ಸ್ಥಾಪನೆ ಕುರಿತು ಭಾರತ ಪಾರ್ಲಿಮೆಂಟಿನ ಸದಸ್ಯರು ತೀವ್ರ ಆತಂಕ ವ್ಯಕ್ತಮಾಡಿರುವರೆಂದು ದೆಹಲಿ ವಾರ್ತೆ

ಪಾಕಿಸ್ತಾನದ ನಾಜಿ ರಕ್ಷಣಾ ಸಚಿವ ಎಂ ಎ ಖುರೊ್ಯೀರಿಗೆ ಕಾರು ಕಾಳಸಂತೆ ಮಾರಾಟ ಸಂದರ್ಭದಲ್ಲಿ 5 ವರ್ಷ ಕಠಿಣ ಸಜೆ ವಿಧಿಸಲಾಗಿದೆ

ಬೆಂಗಳೂರು ಕಾರ್ಪೊರೇಷನ್ ಆಗ್ಗ ಅಂಗಡಿಗಳ ಮೂಲಕ ಅಕ್ಕಿ ಸರಬರಾಜು ಮಾಡುವದನ್ನು ನಿಲ್ಲಿಸಲಿದೆ

ಶರಾವತಿ ಪ್ರಾಜೆಕ್ಟಿನ ಬಳಿ ಲಾರಿಯೊಂದು ತಲೆಕೆಳಗಾಗಿ 5 ಜನರು ಸತ್ತರೆಂದು ಶಿವಮೊಗ್ಗ ವಾರ್ತೆ

ಭಾರತ ಸೇನೆಗೆ ಹೆಚ್ಚು ಹಾಲಿನ ಪುಡಿ ಕೊಡಲಾಗುವದು


ವುಡ್‌ಲ್ಯಾಂಡ್ಸ್ ವೈಭವ 5 ನೇ ವಾರ

ದಿಲ್ಲೀ – ಕ – ಥಗ್ (ಹಿಂದಿ)

ಸಾರಿ ನೋಡಿದರೂ ಮತ್ತೆಮತ್ತೆ ನೋಡಬೇಕೆನ್ನಿಸುವ ಚಿತ್ರರತ್ನ

ನಾ— 1–3–59 ರಿಂದ

ಮಾಧವಿ

ಟವರ್ಗ — ಎಸ್ ಜಾನಕಿ, ದೇವಿಕ, ಮನೋಹರ
ಹಾಸ್ಯ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

## ಕ್ಷೀರೋತ್ಪನ್ನ ಹೆಚ್ಚಲಿದೆ

ವಾಷಿಂಗ್ಟನ್— ಅಮೇರಿಕಾದಲ್ಲಿ ಕಳೆದ ವರ್ಷ 125000000 ಪೌಂಡು ಹಾಲು ಉತ್ಪನ್ನವಾಯಿತು ; ಈ ವರ್ಷ ಕ್ಷೀರೋತ್ಪನ್ನ ಇನ್ನೂ ಹೆಚ್ಚುವದೆಂಬ ನಿರೀಕ್ಷಣೆಯಿದೆ, ಎಂದು ವ್ಯವಸಾಯ ಇಲಾಖೆ ಪ್ರಕಟಿಸಿದೆ. ಸರಾಸರಿ ಹಸು ವೊಂದರ ಹಾಲಿನ ಉತ್ಪನ್ನ ಅನುಕ್ರಮವಾಗಿ ಹೆಚ್ಚುತ್ತಿದೆ ; 1938 ರಲ್ಲಿ ಈ ಸರಾಸರಿ 6300 ಪೌಂಡುಗಳ ಮಟ್ಟವನ್ನು ಮುಟ್ಟಿತು ; ಇದು ಅತ್ಯಂತ ಪ್ರಮಾಣದ ಉತ್ಪನ್ನ, ಎಂದೂ ಇಲಾಖೆ ತಿಳಿಸಿದೆ

## ಭಾರಿ ಗೂಳಿ

ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ದನಗಳ ಪ್ರದರ್ಶನದಲ್ಲಿ ಭಾಗವಹಿಸಿದ್ದ 1 ಸಾವಿರ ಹೊರಗಿನ ಜಾನುವಾರುಗಳ ಪೈಕಿ ನೆಲ್ಲೂರಿನ ಒಂದು ರಾಕ್ಷಸಾಕಾರದ ಗೂಳಿಯು 10 ಸಾವಿರ ಪೌಂಡುಗಳಷ್ಟು ತೂಗಿತು. ಅದಕ್ಕೆ ರೂ. 30 ಸಾವಿರ ಬೆಲೆ ಕೊಟ್ಟು ಕೊಳ್ಳುವದಾಗಿ ಬ್ರೆಜಿಲ್ ದೇಶದವರೊಬ್ಬರು ಕೇಳಿದಾಗ ಅದರ ಮಾಲೀಕರು ಒಪ್ಪಲಿಲ್ಲ. ಅದಕ್ಕೆ 8 ವರ್ಷ. ಅದರ ವೀರ್ಯದಿಂದ ಉತ್ಪನ್ನವಾದ 3 ವರ್ಷದ ಕರುವನ್ನು ರೂ 10 ಸಾವಿರ ಕೊಟ್ಟು ಕೊಳ್ಳಲಾಗಿದೆ

---

ಈ ತಿಂಗಳ 22 ರಂದು ಬೆಂಗಳೂರಿನ ಸುಭಾಷ ನಗರದಲ್ಲಿ ಆರಂಭವಾದ ಪಶು ಪ್ರದರ್ಶನದಲ್ಲಿ 1 ಸಾವಿರ ಪಶುಗಳು, 1 ಸಾವಿರ ಕೋಳಿಗಳು ಮತ್ತು 60 ಕುರಿಗಳು ಮತ್ತು ಕುದುರೆಗಳು ಇದ್ದವು

## ಪಕ್ಕದ ಚಿತ್ರ

ಕ್ರಾಂತಿಪೂರ್ವ ಉಯ್ಬೆಕ್ ರೈತ ಸಾವಿರಾರು ವರ್ಷಗಳ ಹಿಂದೆ ಉಳುತ್ತಿದ್ದಂತೆ ಹಿಂದಿನ ಕಾಲದ ಮಂದ ನೇಗಿಲು ಮತ್ತು ಎತ್ತುಗಳಿಂದ ಕೃಷಿಮಾಡುತ್ತಿದ್ದ, ಅತ ಸಾಕಷ್ಟು ಆಳವಾಗಿ ಉಳದ ಗುಳಿಗಳಲ್ಲಿ ಬಿತ್ತಲು ಶಸ್ತ್ರ ವಿಡಿಲಲ್ಲಿ ಬೀಜ ತುಂಬಿಕೊಂಡು ತರುತ್ತಿದ್ದ : ಹುಟ್ಟುವಳಿ ತೀರಾ ಕಡಮೆಯಾಗಿತ್ತು ; ಫಲವತ್ತಾದ ಭೂಮಿಗಳು ಸಹ ಮರುಭೂಮಿಗಳಂತಿದ್ದವು.

Printed & Published by
Dharma Prachara Press M S
Krishna Rao at the Satyavadi
Press Chamarajapuram, Mysore